# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ | ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೬, ೨೦೧೨ (ಭಾದ್ರಪದ ೧೫, ಶಕ ವರ್ಷ ೧೯೩೪) | ಸಂಚಿಕೆ ೩೬


## ಭಾಗ – ೪ಎ

### ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಛ ನ್ಯಾಯಾಲಯವು ಮಾಡಿದ ನಿಯಮಗಳು

ಜಲಸಂಪನ್ಮೂಲ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸನೀಇ 13 ಅಜಅ 2011, ಬೆಂಗಳೂರು, ದಿನಾಂಕ: 16–08–2012.

ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿಪಡಿಸುವ ಮತ್ತು ಅಂತರ್ಜಲ ಅತಿ ಬಳಕೆ ನಿಯಂತ್ರಣ ಮಾಡುವ ಸಲುವಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 (2011ರ ಕರ್ನಾಟಕ ಅಂತರ್ಜಲ ಅಧಿನಿಯಮ ಸಂಖ್ಯೆ 25)ವನ್ನು ದಿನಾಂಕ: 20–06–2011 ರಿಂದ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಜಾರಿಗೆ ತರಲಾಗಿದೆ. ಸದರಿ ಅಧಿನಿಯಮ 3(1) ರನ್ವಯ ದಿನಾಂಕ: 16–03–2012 ರಂದು ಕರ್ನಾಟಕ ಅಂತರ್ಜಲ ಪ್ರಾಧಿಕಾರ ರಚಿಸಲಾಗಿದೆ.

ರಾಜ್ಯದ ಅಂತರ್ಜಲ ಸಂಪನ್ಮೂಲವನ್ನು ಮಾರ್ಚ್ 2009ರ ಅಂತ್ಯಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೇಂದ್ರೀಯ ಅಂತರ್ಜಲ ಮಂಡಳಿಯ ಸಹಯೋಗದೊಂದಿಗೆ ಮೌಲೀಕರಿಸಿದಂತೆ 35 ತಾಲ್ಲೂಕುಗಳನ್ನು ಅಂತರ್ಜಲ ಅತಿ ಬಳಕೆ ಎಂದು ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ ಅಂತರ್ಜಲ ಅತಿ ಬಳಕೆ ಮತ್ತು ಜಲಮಟ್ಟ ಕುಸಿತವನ್ನು ತಡೆಯಲು ಜಾರಿಗೊಳಿಸಲಾದ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 ಮತ್ತು ನಿಯಮಾವಳಿ 2012ನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಮಾರ್ಚ್ 2009ರ ಅಂತ್ಯಕ್ಕೆ ರಾಜ್ಯದ ಅಂತರ್ಜಲ ಸಂಪನ್ಮೂಲವನ್ನು ಮೌಲೀಕರಿಸಿ ಅಂತರ್ಜಲ ಅತಿ ಬಳಕೆ ಪ್ರದೇಶಗಳೆಂದು ವರ್ಗೀಕರಿಸಿದ ಈ ಕೆಳಕಂಡ 35 ತಾಲ್ಲೂಕುಗಳನ್ನು ಸದರಿ ಅಧಿನಿಯಮದ ಪ್ರಕರಣ 10(3) ರಡಿ ಪ್ರದತ್ತವಾದ ಅಧಿಕಾರದನ್ವಯ ಮತ್ತು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ರಡಿ ರಚಿಸಲಾದ ಕರ್ನಾಟಕ ಅಂತರ್ಜಲ ಪ್ರಾಧಿಕಾರ ಸಭೆಯ ದಿನಾಂಕ: 19–06–2012 ರಲ್ಲಿ ಅಂತರ್ಜಲ ಅತಿ ಬಳಕೆಯ ತಾಲ್ಲೂಕುಗಳೆಂದು ಗುರುತಿಸಿರುವ 35 ತಾಲ್ಲೂಕುಗಳಲ್ಲಿ ಅಂತರ್ಜಲ ಅಧಿನಿಯಮವನ್ನು ಅನುಷ್ಠಾನಗೊಳಿಸಲು ನಿರ್ಣಯಿಸಿ, ದಿನಾಂಕ: 03–12–2012 ರಿಂದ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ.

| ಕ್ರಸಂ. | ತಾಲ್ಲೂಕು | ಜಿಲ್ಲೆ |
|---|---|---|
| 1. | ಬಾದಾಮಿ | ಬಾಗಲಕೋಟೆ |
| 2. | ಬಾಗಲಕೋಟೆ | |

| ಕ್ರ.ಸಂ. | ತಾಲ್ಲೂಕು | ಜಿಲ್ಲೆ |
|---|---|---|
| 3. | ದೇವನಹಳ್ಳಿ | ಬೆಂಗಳೂರು ಗ್ರಾಮಾಂತರ |
| 4. | ದೊಡ್ಡ ಬಳ್ಳಾಪುರ | |
| 5. | ಹೊಸಕೋಟೆ | |
| 6. | ನೆಲಮಂಗಲ | |
| 7. | ಆನೇಕಲ್ | ಬೆಂಗಳೂರು ನಗರ |
| 8. | ಬೆಂಗಳೂರು ಪೂರ್ವ | |
| 9. | ಬೆಂಗಳೂರು ಉತ್ತರ | |
| 10. | ಬೆಂಗಳೂರು ದಕ್ಷಿಣ | |
| 11. | ಅಥಣಿ | ಬೆಳಗಾವಿ |
| 12. | ಬೈಲಹೊಂಗಲ | |
| 13. | ರಾಮದುರ್ಗ | |
| 14. | ಸವದತ್ತಿ | |
| 15. | ಹಗರಿ ಬೊಮ್ಮನಹಳ್ಳಿ | ಬಳ್ಳಾರಿ |
| 16. | ಹಡಗಲಿ | |
| 17. | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 18. | ಚಿಂತಾಮಣಿ | |
| 19. | ಗೌರಿಬಿದನೂರು | |
| 20. | ಗುಡಿಬಂಡೆ | |
| 21. | ಶಿಡ್ಲಘಟ್ಟ | |
| 22. | ಚಿತ್ರದುರ್ಗ | ಚಿತ್ರದುರ್ಗ |
| 23. | ಹೊಳಲ್ಕೆರೆ | |
| 24. | ಜಗಳೂರು | ದಾವಣಗೆರೆ |
| 25. | ಬಂಗಾರಪೇಟೆ | ಕೋಲಾರ |
| 26. | ಕೋಲಾರ | |
| 27. | ಮಾಲೂರು | |
| 28. | ಮುಳಬಾಗಿಲು | |
| 29. | ಶ್ರೀನಿವಾಸಪುರ | |
| 30. | ಯಲಬುರ್ಗಾ | ಕೊಪ್ಪಳ |
| 31. | ಕನಕಪುರ | ರಾಮನಗರ |
| 32. | ರಾಮನಗರ | |
| 33. | ಚಿಕ್ಕನಾಯ್ಕನಹಳ್ಳಿ | ತುಮಕೂರು |
| 34. | ಕೊರಟಗೆರೆ | |
| 35. | ಮಧುಗಿರಿ | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 581